Observation by the Chair

Re : Pamphlets thrown from the vistors gallery.

ಅಧ್ಯಕ್ಷರು.— ಮುಂದಿನ ಕಾರ್ಯಕ್ರಮಕ್ಕೆ ಹೋಗುವುದಕ್ಕಿಂತ ಮುಂಚಿತವಾಗಿ ಈ ಸಭೆ ಗಮನಿಸಿದ ಒಂದು ದುರ್ಘಟನೆ ಏನಿದೆ. ಗ್ಯಾಲರಿಯಿಂದ ಕೆಲವು ಜನರು ಭಿತ್ತಿ ಪತ್ರಗಳನ್ನು ಎಸೆದಿದ್ದುದು ಬಹಳ ವಿಷಾದದ ಸಂಗತಿಯಾಗಿದೆ. ಮತ್ತೆ ಈ ಮನೆಗೆ ಅವಮಾನ ಮಾಡಿರತಕ್ಕ ಒಂದು ವಿಚಾರವಾಗಿದೆ. ಅವರನ್ನು ಈಗಾಗಲೇ ಈ ಪುನೆಯ ವಾಚ್ ಅಂಡ್ ವಾರ್ಡ್‌ನವರು ದಸ್ತಗಿರಿ ಮಾಡಿ ಅವರ ಸ್ವಾಧೀನ ದಲ್ಲಿಟ್ಟು ಕೊಂಡಿದ್ದಾರೆ. ಅವರು ಯಾರು ಎಂದು ಹೇಳಿ ಇದರ ಬಗ್ಗೆ ವಿಚಾರಣೆ ಮಾಡಲಾಗಿ, ಅವರು ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳು ಹಾಗೆಂದು ಕಂಡು ಬಂದಿದೆ. ಅದರಲ್ಲಿ ಸುಮಾರು ೧೧ ಜನ ಮಹಿಳಾ ವಿದ್ಯಾರ್ಥಿಗಳೇ ಇದ್ದಾರೆ. ಈ ಘಟನೆ ನಡೆದ ತಕ್ಷಣವೇ ಅವರು ಈ ಮನೆಗೆ ಮಾಡಿದಂಥ ಒಂದುದೊಡ್ಡ ಅಪಾದನೆ, ಕ್ಷಮಿಸಲಾರದಂಥ ಅಪಾದನೆ ಹಾಗೆಂದು ಹೇಳಿ ಅವರಿಗೆ ಶಿಕ್ಷೆ ವಿಧಿಸಲೇಬೇಕೆಂದು ನನಗನ್ನಿಸಿತು ಆದರೆ ಈ ಅಪರಾಧವನ್ನು ಮಾಡಿರತಕ್ಕವರ ಸಂಖ್ಯೆಯಲ್ಲಿ ಹೆಚ್ಚಾಗಿ ಹೆಣ್ಣು ಮಕ್ಕಳ ಸಂಖ್ಯೆಯೇ ಜಾಸ್ತಿಯಾಗಿತ್ತು. ಮತ್ತೆ ಇದರ ಬಗ್ಗೆ ನಾವು ಯೋಚನೆ ಮಾಡಿ ವಿಚಾರ ಮಾಡಿದಾಗ ಆ ವಿದ್ಯಾರ್ಥಿಗಳು ನಾವು ಮಾಡಿದ್ದು ಸರಿಯಲ್ಲ ಹಾಗೆಂದು ನನಗೆ ಒಂದು ಪತ್ರವನ್ನು ಕೂಡ ಬರೆದಿದ್ದಾರೆ ಅದನ್ನು ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

"To

The Hon'ble Speaker,
Karnataka Legislative Assembly,
Respected Sir,

We the students of Bangalore Medical College sincerely apologise our today's behaviour in disturbing the Procee tings of the House by throwing hand bills insisting our demands. We request the House through you to kindly pardon us ?".

ಹಾಗೆಂದು ಹೇಳಿ ಬರೆದು ರುಜು ಹಾಕಿ ಕೊಟ್ಟಿದ್ದಾರೆ. ಆದುದರಿಂದ ನಾನಾದರೂ ಕೂಡ ಅವರಿಗೆ ಒಂದು ವಾರ್ನಿಂಗ್ ಕೊಡುವುದಕ್ಕಿಂತ ಮುಂಚಿತವಾಗಿ ಒಂದು ಮಾತನ್ನು ಈ ಸಭೆಯ ಮುಖಾಂತರ ಹೇಳುವುದಕ್ಕೆ ಇಷ್ಟಪಡುತ್ತೇನೆ ಇಡೀ ಸಭೆ ಕೆಲವು ದಿವಸಗಳ ಹಿಂದ ಪಕ್ಷಭೇದ ವಿಲ್ಲದೆ ಅವರ ವಿಚಾರವನ್ನು ಸರ್ಕಾರ ಪರಿಗಣಿಸುತ್ತಿದೆಂದು ಹೇಳಿದಾಗ್ಯೂ ಕೂಡ, ಆವರು ಅವರ ಬೇಡಿಕೆಗಳ ಬಗ್ಗೆ ಒತ್ತಾಯ ಮಾಡಕೂಡದೆಂದು ಹೇಳಿದಾಗ್ಯೂ ಕೊಡ ಅವರು ಏನ್ನು ಈಘಟನೆ ನಡೆಸಿದ್ದಾರೆ, ಇದು ಕ್ಷಮಾರ್ಹವಾದ ಘಟನೆಯಾಗಿದೆ. ಆದಾಗ್ಯೂ ಕೂಡ ವಿದ್ಯಾರ್ಥಿಗಳು ನನಗೆ ಒಂದು ಪತ್ರವನ್ನು ಬರೆದಿದ್ದಾರ ಆದುದರಿಂದ ಅದನ್ನು ನಾನು ಗಮನಕ್ಕೆ ತೆಗೆದುಕೊಂಡು. ಅವರು ಇನ್ನು ಮುಂದೆ ಇಂಥಾದ್ದನ್ನು ಮಾಡಕೂಡದೆಂದು ವಾರ್ನಿಂಗ್ ಕೂಡತಕ್ಕಂಥದ್ದನ್ನು ಮಾಡಿ ಇಂಥದ್ದರಲ್ಲಿ ಮುಂದೆ ತೊಡಗಿದರೆ ಉಗ್ರವಾದ ಶಿಕ್ಷೆ ಮಾಡಬೇಕಾಗುತ್ತದೆ ಎನ್ನುತಕ್ಕ ಮಾತನ್ನು ಹೇಳಿ ಈ ಸಭೆ ಏಳುವಪರಿಗೂ ಅವರು ಕಸ್ಟಡಿಯಲ್ಲಿದ್ದು ಸಭೆ ಮುಗಿದ ನಂತರ ಅವರು ಹೊರಗಡೆ ಬಿಡಬೇಕು ಎನ್ನುವುದಕ್ಕೆ ಆದೇಶ ನೀಡುವುದಕ್ಕೆ ನೀವೆಲ್ಲರೂ ಒಪ್ಪಿಗೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವೈ. ರಾಮಕೃಷ್ಣ.— ಈ ಸಭೆ ಒಪ್ಪಿಗೆ ಕೊಡುವುದಕ್ಕಿಂತ ಮುಂಚೆ ನನ್ನದೊಂದು ಸಲಹೆ. ಈ ಸಭೆಯ ಘನತೆ ಗೌರವ, ಸಂಪ್ರದಾಯವನ್ನು ಉಳಿಸಿಕೊಂಡು ಹೋಗಬೇಕಾದ್ದು ನಮ್ಮೆಲ್ಲರ ಧರ್ಮ ಮತ್ತು ಕರ್ತವ್ಯವಾಗಿದೆ. ಇಪತ್ತು ತಾವು ಹೇಳಿದಿರಿ ಈ ಘಟನೆಯನ್ನು ನಡೆಸಿದಂಥವರು ಹೆಚ್ಚಾಗಿ ಹೆಣ್ಣು ಮಕ್ಕಳಿದ್ದಾರೆಂದು ಹೇಳಿ ತಮ್ಮ ರೂಲಿಂಗ್ ಕೊಟ್ಟಿದ್ದೀರಿ ಅದಕ್ಕೆ ತಲೆಬಾಗುತ್ತೇನೆ. ಆದರೆ ಇಂಥಾ ಪ್ರಸಂಗಗಳು ಮುಂದೆ ನಡೆಯದಹಾಗೆ ನೋಡಿಕೊಳ್ಳುವುದಕೋಸ್ಕರ ಯಾರು ಪ್ರೇಕ್ಷಕ ಗ್ಯಾಲರಿಗೆ ಹೋಗಲು ಪಾರಂಗೆ ರುಜು ಹಾಕಿ ಕೊಡುತ್ತಾರೋ, ಅವರೇ ಇದರ ಜವಾಬ್ದಾರಿಕೆಯನ್ನು, ಹೊಣೆಗಾರಿಕೆಯನ್ನು ಹೊರಬೇಕಾಗುತ್ತದೆಂದು ಕೇಳಿಕೊಳ್ಳುತ್ತೇನೆ. ಇನ್ನು ಏನಾದರೂ ದೊಡ್ಡದಾಗಿದ್ದರೆ ಹೇಗೆ ?

ಅದಕ್ಕೆ ರುಜು ಹಾಕಿದವರೇ ಹೊಣೆಗಾರಿಕೆಯನ್ನು ಹೊರಬೇಕಾಗುತ್ತದೆ. ದಯವಿಟ್ಟು ಇನ್ನು ಮುಂದೆ ಇದನ್ನು ಪರಿಪಾಲಿಸುತ್ತಾರೆಂದು ಭಾವಿಸಿ ಇವತ್ತು ಅವರು ಮಾಡಿದ್ದನ್ನು ಕ್ಷಮಿಸಬಹುದೆಂದು ಹೇಳುತ್ತೇನೆ.

ಅಧ್ಯಕ್ಷರು.—ಒಂದೊಂದು ಸಾರಿ ನಾವು ಸಾಮಾನ್ಯವಾಗಿ ಯಾರಾದರೂ ಬಂಜ ತಕ್ಷಣವೇ ರುಜು ಹಾಕಿ ಕೊಟ್ಟು ಬಿಡುತ್ತೇವೆ. ನಾವು ಸದಸ್ಯರಾದಾಕ್ಷಣ ಮಾಡತಕ್ಕದ್ದಲ್ಲ,ಆದರೆ ಸಹಿ ಮಾಡದಿದ್ದರೆ ಅವರು ಎಲ್ಲಿ ಬೈಯ್ದುಕೊಂಡು ಹೋಗುತ್ತಾರೊ ಎಂದು ಹೆದರಿ ಸಹಿ ಮಾಡಿಕೊಟ್ಟು ಬಿಟ್ಟಿರುತ್ತೇವೆ.

ಶ್ರೀ ಪಿ. ರಾಮದೇವ್.—ದೂರದಿಂದ ಬಂದಿರುತ್ತಾರೆ...

ಅಧ್ಯಕ್ಷರು.—ಆದುದರಿಂದ ಗೊತ್ತಿದ್ದಂಥವರಿಗೆ ಮಾತ್ರ ರುಜು ಹಾಕಿಕೊಡತಕ್ಕಂಥದು ಒಳ್ಳೆಯದು ಹಾಗೆಂದು ಹೇಳುತ್ತಾ ಇದನ್ನು ಇನ್ನು ಹೆಚ್ಚಿಗೆ ಲಂಬಿಸತಕ್ಕಂಥದ್ದು ಬೇಡವೆಂದು ಹೇಳುತ್ತಾ....

ಶ್ರೀ ಬಿ.ಪಿ. ಭಾವಿ.—ಅಧ್ಯಕ್ಷರೇ, ಯಾರು ಪಾಸಿಗೆ ಸಹಿ ಮಾಡಿದ್ದರೋ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದಿರಿ...

ಶ್ರೀ ಎ. ಲಕ್ಷ್ಮೀಸಾಗರ್.—ಎಲ್ಲಿ ಹೇಳಿದಿರಿ, ನೀವು ಏನ್ರಿ ಬಾವಿಯವರು, 'ಬಾವಿ ತೋರಿಸಿದರಲ್ಲಿ ಹಗಲೇ ಬೀಳಬೇಕಾಗುತ್ತದೆ.'

ಶ್ರೀ ಎಸ್.ಆರ್. ಬೊಮ್ಮಾಯಿ.—ಅಧ್ಯಕ್ಷರೇ ತಾವು ಏನು ಸಭೆಯ ಮುಂದಿಟ್ಟಿದ್ದೀರಿ ಅದಕ್ಕೆ ಒಪ್ಪಿಗೆ ಕೊಡುತ್ತಾ ಮಾನ್ಯ ಕಾನೂನು ಮಂತ್ರಿಗಳವರು ಏನು ಹೇಳಿದರು, ಪಾಸ್ ಕೊಡಬೇಕಾದರೆ ಜವಾಬ್ದಾರಿ ಇಟ್ಟುಕೊಂಡು ಕೊಡಬೇಕಾಗುತ್ತದೆ, ಸಾಧ್ಯವಾದಷ್ಟು ಮಟ್ಟಿಗೆ ಪರಿಶೀಲನೆ ಮಾಡಿ ಕೊಡ ಬೇಕಾಗುತ್ತದೆ, ಆದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಾಗಲೀ ಅಥವಾ ಅವರನ್ನು ಜವಾಬ್ದಾರಿಗೆ ಈಡುಮಾಡುವುದಾಗಲೀ, ಮಾಡಿದರೆ ಇದರಿಂದ ನಾವು ಇಲ್ಲಿ ಶಾಸಕರಾಗಿ ಕೆಲಸ ಮಾಡುವುದಕ್ಕೆ ಕಷ್ಟವಾಗು ತ್ತದೆ. ದಯವಿಟ್ಟು ಅದೆಲ್ಲಾ ಬೇಡ.

ಶ್ರೀ ಆರ್. ಗುಂಡೂರಾವ್.—ಆ ಟ್ರಸ್ಟಿನಲ್ಲಿ ಯಾರು ಯಾರಿದ್ದಾರೆಂದು ಕೇಳಿದ್ದರು ಅದಕ್ಕೆ ಅವರ ಹೆಸರುಗಳನ್ನು ತರಿಸಿದ್ದೇನೆ. ತಮ್ಮ ಪರವಾನಿಗೆ ಪಡೆದು ಓದಿಬಿಡುತ್ತೇನೆ. ಮೊದಲನೆಯದಾಗಿ ಶ್ರೀಮಾನ್ ದೇವರಾಜ್ ಅರಸ್ ೨) ಶ್ರೀ ಹಾರನ ಹಳ್ಳಿ ರಾಮಸ್ವಾಮಿ ೩) ಆರ್.ಎನ್. ದೇಸಾಯಿ ೪) ಸುಬ್ಬಯ್ಯ ಶೆಟ್ಟಿ ೫) ಸಿದ್ದರಾಮ ರೆಡ್ಡಿ ಈ ೫ ಜನ ಇರತಕ್ಕಂಥ ಟ್ರಸ್ಟಿಗೆ ೧ ಎಕರೆ ೨೦ ಗುಂಟೆ ಜಮೀನನ್ನು ಕೇವಲ ೬೦೦ ರೂಪಾಯಿಗಳಿಗೆ ಹೇಗೆ ಕೊಟ್ಟಿದ್ದಾರೆ ನೋಡಿ ಸ್ವಾಮಿ.

6-00 P.M.

LEGISLATIVE BUSINESS

The Cotton Ginning and Pressing Factories (Karnataka Amendment) Bill, 1981.

Motion to Consider

MR. SPEAKER.—We have a small Bill, *i.e.* The Cotton Ginning and Pressing Factories (Karnataka Amendment) Bill, 1981 There is an official amendment to that. Let us complete.

SRI A. LAKSHMISAGAR.—Sir, We had a discussion among ourselves that an official amendment be moved in respect of the period within which the Government must nominate by selection or nominate and Government must permit the rules to remain upto 31st March 1984. This is the official amendment to be moved now.